ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 11.11.2025.

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಎಂ ಬಿ ಎಲ್ ವಕೀಲರಿಂದಃ

ವಾದಿ ಈ ದಾವೆಯನ್ನು ದಾರಿಗಾಗಿ ಸಲ್ಲಿಸಿದ್ದಾರೆ. ನಿ.ಪಿ.5 ರಿಂದ 8 ರ ಭಾವ ಚಿತ್ರದಲ್ಲಿ ಕಂಡುಬರುವ ರಸ್ತೆಯ ಸಂಬಂಧ ವಾದಿ ಈ ದಾವೆ ಸಲ್ಲಿಸಿದ್ದಾರೆಂದರೆ ಸರಿ. ನಿ.ಪಿ.5 ರಿಂದ 8 ರ ಭಾವ ಚಿತ್ರದಲ್ಲಿ ಕಂಡುಬರುವ ರಸ್ತೆಗೆ ಅಂದರೆ ದಾವಾ ರಸ್ತೆಯ ಉತ್ತರ ದಿಕ್ಕಿಗೆ ಹೆಚ್ ಎಲ್ ನಂ40, 41, 42 ಮತ್ತು 43 ಸ್ವತ್ತು ಬರುತ್ತದೆಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ದಾಖಲೆಗಳನ್ನು ನಾನು ನೋಡಿರುತ್ತೇನೆ . ಸದರಿ ಕ್ರಯ ಪತ್ರಗಳ ಸ್ವತ್ತಿನ ಸಂಖ್ಯೆ ನನಗೆ ಗೊತ್ತಿಲ್ಲ. ಹೆಚ್ ಎಲ್ ನಂ.40, 41, 42 ಮತ್ತು 43 ರ ಸ್ವತ್ತಿನ ದಾಖಲೆಗಳನ್ನು ನಾನು ಒಂದು ಭಾರಿ ನೋಡಿರುತ್ತೇನೆ. ಹೆಚ್ ಎಲ್ ನಂ.41 ನ್ನು ಪ್ರತಿವಾದಿಗಳ ತಂದೆಯಾದ ಕೃಷ್ಣಪ್ಪ ರವರು ತಮ್ಮಣ್ಣ ರವರಿಂದ ಖರೀದಿಸಿದ ಸ್ವತ್ತು ಎಂದರೆ ಸರಿ. ಹೆಚ್ ಎಲ್ ನಂ.40, 41, 42 ಮತ್ತು 43 ರ ಸ್ವತ್ತುಗಳಲ್ಲಿ ಮಣ್ಣಿನ ಮನೆ ಇರುವುದಿಲ್ಲ.

2. ದಾವಾ ರಸ್ತೆಯ ಸಂಬಂಧ ಪ್ರತಿವಾದಿಗಳು ವಾದಿಗೆ ತೊಂದರೆ ನೀಡಿದ್ದರಿಂದ ಈ ದಾವೆ ಸಲ್ಲಿಸಿದ್ದಾರೆಂದರೆ ಸರಿಯಲ್ಲ. 12 ಅಡಿ ರಸ್ತೆಯನ್ನು ಪ್ರತಿವಾದಿಗಳು 08 ಅಡಿ ರಸ್ತೆ ಎಂದು ಪಂಚಾಯ್ತಿಯಲ್ಲಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ದಾವಾ ರಸ್ತೆಯಲ್ಲಿ ಪಾಯ ತೆಗೆಯಲು ಪ್ರಯತ್ನಿಸಿದಾಗ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ದಾವಾ ರಸ್ತೆಯ ದಕ್ಷಿಣ ದಿಕ್ಕಿಗೆ ನಂಜೇಗೌಡರ ಮನೆ ಇದೆ ಎಂದರೆ ಸರಿ. ನಾನು ಪ್ರತಿವಾದಿಗಳಿಗೆ ಸಹಾಯ ಮಾಡಲು, ಪ್ರತಿವಾದಿಗಳ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃ

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.